ಬೆಂಗಳೂರು ನಗರ ವಿಶ್ವವಿದ್ಯಾನಿಲಯ

ಆಗು ನೀ ಅನಿಕೇತನ
BE BOUNDLESS

BENGALURU CITY UNIVERSITY

Office of the Registrar (Evaluation), Central College Campus, Dr.AmbedkarVeedhi, Bengaluru – 560 001. E-mail: registrarevlubcu@gmail.com, Ph.No.080-2229555

ಸಂಖ್ಯೆ:ಬೆಂ.ನ.ವಿ/ಪ.ವಿ/ ಸ್ನಾತಕ ಮೌಲ್ಯಮಾಪನ/2023-24 ದಿನಾಂಕ: 20.05.2023

# ಸುತ್ತೋಲೆ

ವಿಷಯ: ಸ್ನಾತಕ ಕೋರ್ಸುಗಳ ಮೌಲ್ಯಮಾಪನ ಪೂರ್ಣಗೊಳಿಸಿ ಫಲಿತಾಂಶ ಬಿಡುಗಡೆ ಮಾಡುವ ಕುರಿತು.

ಉಲ್ಲೇಖ: ಸಂಖ್ಯೆ ಬೆಂ..ನ..ವಿ/ಪ.ವಿ/ಪರೀಕ್ಷಾ ಮೌಲ್ಯಮಾಪನ/ಯು.ಜಿ/2022-23 ದಿನಾಂಕ:20.04.2023

*****

ಮಾರ್ಚ್/ಏಪ್ರಿಲ್-2023ರಲ್ಲಿ ನಡೆದ ಸ್ನಾತಕ ಪರೀಕ್ಷೆಗಳ ಮೌಲ್ಯಮಾಪನ ಕಾರ್ಯ ಪ್ರಾರಂಭವಾಗಿವೆ. ಉನ್ನತ ಶಿಕ್ಷಣ ಇಲಾಖೆಯ ಪ್ರಧಾನ ಕಾರ್ಯದರ್ಶಿಯವರು ಶೀಘ್ರವಾಗಿ ಫಲಿತಾಂಶ ಬಿಡುಗಡೆ ಮಾಡುವಂತೆ ಸೂಚಿಸಿರುತ್ತಾರೆ. ಆದುದರಿಂದ ಆದಷ್ಟು ಬೇಗ ಎಲ್ಲಾ ವಿಷಯದ ಅಧ್ಯಾಪಕರನ್ನು(ಅತಿಥಿ ಉಪನ್ಯಾಸಕರು ಸೇರಿದಂತೆ) ಮೌಲ್ಯಮಾಪನ ಪ್ರಕ್ರಿಯೆಯಲ್ಲಿ ಭಾಗವಹಿಸಿ ಶೀಘ್ರವಾಗಿ ಮೌಲ್ಯಮಾಪನ ಕಾರ್ಯವನ್ನು ಮುಗಿಸಿ ಫಲಿತಾಂಶ ಬಿಡುಗಡೆ ಮಾಡಲು ಸಹಕರಿಸಿಬೇಕೆಂದು ಪ್ರಾಂಶುಪಾಲರಿಗೆ ಈ ಮೂಲಕ ಕಛೇರಿ ಸುತ್ತೋಲೆ ದಿನಾಂಕ 20.04.2023ರಲ್ಲಿ ಕೋರಲಾಗಿತ್ತು. ಆದರೆ, ಕೆಲವು ಕಾಲೇಜಿನ ಅಧ್ಯಾಪಕರು ಮೌಲ್ಯಮಾಪನ ಕಾರ್ಯದಲ್ಲಿ ಭಾಗವಹಿಸದಿರುವುದು ಗಮನಕ್ಕೆ ಬಂದಿರುತ್ತದೆ. ಇದರಿಂದ ವಿದ್ಯಾರ್ಥಿಗಳ ಫಲಿತಾಂಶ ಪ್ರಕಟಿಸಲು ವಿಳಂಬವಾಗುತ್ತಿದೆ. ಆದುದರಿಂದ, ಪ್ರಾಂಶುಪಾಲರುಗಳು ತಮ್ಮ ಕಾಲೇಜಿನ ಎಲ್ಲಾ ಅರ್ಹ ಭೋದಕ ಸಿಬ್ಬಂದಿಯನ್ನು ಮೌಲ್ಯಮಾಪನಕ್ಕೆ ಕಳುಹಿಸಬೇಕೆಂದು ಮತ್ತೊಮ್ಮೆ ಕೋರಲಾಗಿದೆ. ಸಂಭದಪಟ್ಟ ಅಧ್ಯಾಪಕರು ಮೌಲ್ಯಮಾಪನ ಕಾರ್ಯದಲ್ಲಿ ಭಾಗವಹಿಸದಿದ್ದರೆ, ನಿಯಮಾನುಸಾರ ಕ್ರಮತೆಗೆದುಕೊಳ್ಳಲಾಗುವುದೆಂದು ಈ ಮೂಲಕ ಸ್ಪಷ್ಟಪಡಿಸಲಾಗಿದೆ.

ತಮ್ಮ ವಿಶ್ವಾಸಿ,

Lok...

**ಕುಲಸಚಿವರು(ಮೌಲ್ಯಮಾಪನ)**

ಬೆಂಗಳೂರು - 560 001

ಗೆ,

ಬೆಂಗಳೂರು ನಗರ ವಿಶ್ವವಿದ್ಯಾಲಯದ ಎಲ್ಲಾ ಸ್ನಾತಕ ಕೋರ್ಸುಗಳ ಹಾಗೂ ಸಂಯೋಜಿತ ಕಾಲೇಜುಗಳ ಪ್ರಾಂಶುಪಾಲರುಗಳು, ಬೆಂಗಳೂರು ನಗರ ವಿಶ್ವವಿದ್ಯಾನಿಲಯ, ಬೆಂಗಳೂರು.

ಪ್ರತಿಗಳು:

1. ಸ್ನಾತಕ ಪರೀಕ್ಷಾ ಮಂಡಳಿ ಅಧ್ಯಕ್ಷರು, ಬೆಂಗಳೂರು ನಗರ ವಿಶ್ವವಿದ್ಯಾಲಯ, ಬೆಂಗಳೂರು.
2. ಕುಲಪತಿಗಳು/ಕುಲಸಚಿವರು(ಆ)/ಕುಲಸಚಿವರು(ಮೌ)/ ವಿತ್ತಾಧಿಕಾರಿಯವರ ಕಾರ್ಯದರ್ಶಿಗಳು, ಬೆಂಗಳೂರು ನಗರ ವಿಶ್ವವಿದ್ಯಾಲಯ, ಬೆಂಗಳೂರು.
3. ವೆಬ್‌ಸೈಟ್ ನಿರ್ವಾಹಕರು, ಮೇಲೆ ಹೇಳಿರುವ ಸುತ್ತೋಲೆಯನ್ನು ಬೆಂಗಳೂರು ನಗರ ವಿಶ್ವವಿದ್ಯಾಲಯದ ವೆಬ್‌ಸೈಟ್‌ನಲ್ಲಿ ಹಾಗೂ ಕಾಲೇಜ್ ಪೋರ್ಟಲ್‌ನಲ್ಲಿ ಅಪ್ಲೋಡ್ ಮಾಡಲು ಕೋರಲಾಗಿದೆ.